# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

ಜ್ಞಾನಸಾಗರ ಆವರಣ, ವಿನಾಯಕ ನಗರ, ಬಳ್ಳಾರಿ-583105

VIJAYANAGARA SRI KRISHNADEVARAYA UNIVERSITY

"Jnana Sagar" Campus, Vinayaka Nagara, Ballari-583 105

ಕುಲಸಚಿವರು


ಸಂಖ್ಯೆ:ವಿ.ಶ್ರೀ.ಕೃ.ವಿ.ವಿ.ಬ/ಕಾ.ಅ.ಮಂ/ಸಂಯೋಜನೆ/2023-24/352 ದಿನಾಂಕ: 25.04.2023

## ಅಧಿಸೂಚನೆ ಪ್ರಕಟಣೆ

**ವಿಷಯ:** 2023-2024ನೇ ಶೈಕ್ಷಣಿಕ ಸಾಲಿಗೆ UUCMS ತಂತ್ರಾಂಶದ ಮುಖಾಂತರ ಸಂಯೋಜನಾ ಅರ್ಜಿ ಆಹ್ವಾನಿಸುವ ಕುರಿತು.

**ಉಲ್ಲೇಖ:** 01. ಸರ್ಕಾರದ ಆದೇಶ ಸಂಖ್ಯೆ: ಇಡಿ 47 ಯುಎನ್ಇ2023, ಬೆಂಗಳುರು, ದಿನಾಂಕ:05.04.2023
02. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 25.04.2023

*****

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ವ್ಯಾಪ್ತಿಯ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ 2023-24ನೇ ಶೈಕ್ಷಣಿಕ ಸಾಲಿನಿಂದ ಕಲಾ, ವಿಜ್ಞಾನ, ವಾಣಿಜ್ಯ, ಶಿಕ್ಷಣ ಮತ್ತು ದೈಹಿಕ ಶಿಕ್ಷಣ ಹಾಗೂ ಇನ್ನಿತರ ಸಾಂಪ್ರದಾಯಿಕ ವಿಷಯಗಳಲ್ಲಿ ಹೊಸ ಪದವಿ ಮಹಾವಿದ್ಯಾಲಯಗಳನ್ನು ಪ್ರಾರಂಭಿಸಲು ಇಚ್ಛಿಸುವ ಸರ್ಕಾರದ ನಿಯಮಾವಳಿಯಂತೆ ನೋಂದಾಯಿಸಲ್ಪಟ್ಟ ಸಂಘ ಸಂಸ್ಥೆಗಳು/ ಸಾರ್ವಜನಿಕ ಟ್ರಸ್ಟ್‌ಗಳಿಂದ ಹೊಸ ಸಂಯೋಜನಾ ಅರ್ಜಿಗಳು ಹಾಗೂ ಪ್ರಸ್ತುತ ವಿಶ್ವವಿದ್ಯಾಲಯದಿಂದ ಸಂಯೋಜನೆ ಹೊಂದಿರುವ ಮಹಾವಿದ್ಯಾಲಯಗಳಿಂದ ಸ್ನಾತಕ/ ಸ್ನಾತಕೋತ್ತರ ಕೋರ್ಸ್‌ಗಳಿಗೆ ಮುಂದುವರಿಕೆ/ ವಿಸ್ತರಣೆ/ ಹೊಸ ಕೋರ್ಸ್/ ಹೊಸ ವಿಷಯ/ ಪ್ರವೇಶ ಮಿತಿ ಹೆಚ್ಚಳ/ ಶಾಶ್ವತ ಸಂಯೋಜನೆ/ ಶಾಶ್ವತ ಸಂಯೋಜನೆ ನವೀಕರಣ/ ಮಹಾವಿದ್ಯಾಲಯಗಳ ಹೆಸರು ಬದಲಾವಣೆ/ಮಹಾವಿದ್ಯಾಲಯ ಸ್ಥಳಾಂತರ/ಆಡಳಿತ ಮಂಡಳಿ ಬದಲಾವಣೆ ಹಾಗೂ ಇತ್ಯಾದಿಗಳಿಗಾಗಿ ಸಂಬಂಧಿಸಿದ ದಾಖಲೆಗಳೊಂದಿಗೆ ನಿಗದಿತ ಸಂಯೋಜನಾ ಶುಲ್ಕವನ್ನು ಪಾವತಿಸಿ ಸರ್ಕಾರದ ಸಂಯೋಜನೆಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

ಸಂಯೋಜನ ಶುಲ್ಕಗಳ ವಿವರ ಹಾಗೂ ಸಂಯೋಜನೆಗೆ ಅರ್ಜಿಗಳನ್ನು ಸಲ್ಲಿಸಲು ಹಾಗೂ ಸಂಬಂಧಿಸಿದ ಇನ್ನಿತರ ಮಾಹಿತಿಯನ್ನು ವಿಶ್ವವಿದ್ಯಾಲಯದ ಜಾಲತಾಣ ವಿಳಾಸ (website: www.vskub.ac.in) ದಲ್ಲಿ ನೋಡಬಹುದು. ಕರ್ನಾಟಕ ಸರ್ಕಾರ ಅಭಿವೃದ್ಧಿ ಪಡಿಸಿದ UUCMS ತಂತ್ರಾಂಶದ ಮುಖಾಂತರ ಅರ್ಜಿಯನ್ನು ಸಲ್ಲಿಸುವುದು.

ಮುಂದುವರೆದು, ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಯ ಮುದ್ರಿತ ಪ್ರತಿ ಪಡೆದು ಶುಲ್ಕ ಭರಿಸಿದ್ದರ ಬಗ್ಗೆ ರಸೀದಿ ಮತ್ತು ಸಂಪೂರ್ಣ ದಾಖಲೆಗಳೆಲ್ಲವುಗಳನ್ನು ಬೈಂಡಿಂಗ್/ಸ್ಪೈರಲ್ ಬೈಂಡಿಂಗ್ ಮಾಡಿಸಿ ಎರಡು ಪ್ರತಿಗಳನ್ನು **ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ,** ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಜ್ಞಾನಸಾಗರ ಆವರಣ, ಬಳ್ಳಾರಿ-583105 ಇವರಿಗೆ ದಿನಾಂಕ: 16.05.2023ರೊಳಗಾಗಿ ಸಲ್ಲಿಸಲು ಸೂಚಿಸಲಾಗಿದೆ.

| ಆನಲೈನ್ ಮೂಲಕ ಸಂಯೋಜನಾ ಅರ್ಜಿ ಸಲ್ಲಿಸುವುದಕ್ಕಾಗಿ ನಿಗದಿಪಡಿಸಲಾದ ದಿನಾಂಕಗಳು | | |
|---|---|---|
| 1. | ಸಂಯೋಜನಾ ಅರ್ಜಿ ಸಲ್ಲಿಸಲು ದಂಡ ರಹಿತ ಶುಲ್ಕದೊಂದಿಗೆ ಕೊನೆಯ ದಿನಾಂಕ | 09.05.2023 |
| 2. | ಸಂಯೋಜನಾ ಅರ್ಜಿ ಸಲ್ಲಿಸಲು ರೂ.20,000 ದಂಡ ಶುಲ್ಕದೊಂದಿಗೆ ಕೊನೆಯ ದಿನಾಂಕ | 15.05.2023 |

ಕುಲಸಚಿವರು,
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.

ಹೆಚ್ಚಿನ ಮಾಹಿತಿಗಾಗಿ ಕಾಲೇಜು ಅಭಿವೃದ್ಧಿ ಮಂಡಳಿಯ ದೂರವಾಣಿ ಸಂಖ್ಯೆ 7892919216 ಕ್ಕೆ ಸಂಪರ್ಕಿಸಬಹುದಾಗಿದೆ.